# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಶರಣಗೌಡ ಜಿ, ವಣಕ್ಯಾಳ, ಹಿಂದಿನ ಕಾರ್ಯದರ್ಶಿ, ಯುಕ್ತಾಪುರ ಗ್ರಾಮ ಪಂಚಾಯಿತಿ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ, (ಪ್ರಸ್ತುತ ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ) ಇವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆ-ಅಂತಿಮ ಆದೇಶ ಹೊರಡಿಸುವ ಬಗ್ಗೆ-ಆದೇಶ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/445/ಗ್ರಾಪಂಕಾ/2013 ದಿನಾಂಕ:12.12.2013.
2. ನಿಬಂಧಕರು, ವಿಚಾರಣೆಗಳು-11, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: LOK/INQ/14-A/517/2013/ ARE-11 ದಿನಾಂಕ:30.11.2016.
3. ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: LOK/INQ/14-A/517/2013/ARE-11 ದಿನಾಂಕ:03.12.2016.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ/860/ಗ್ರಾಪಂಕಾ/2016 ದಿನಾಂಕ:16.01.2017.
5. ಶ್ರೀ ಶರಣಗೌಡ ಜಿ, ವಣಕ್ಯಾಳ, ಹಿಂದಿನ ಕಾರ್ಯದರ್ಶಿ, ಯುಕ್ತಾಪುರ ಗ್ರಾಮ ಪಂಚಾಯಿತಿ, ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ:28.02.2017.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಸರ್ಕಾರದ ಆದೇಶದಲ್ಲಿ ಶ್ರೀ ಶರಣಗೌಡ ಜಿ, ವಣಕ್ಯಾಳ, ಹಿಂದಿನ ಕಾರ್ಯದರ್ಶಿ, ಯುಕ್ತಾಪುರ ಗ್ರಾಮ ಪಂಚಾಯಿತಿ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ, (ಪ್ರಸ್ತುತ ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ) ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14-ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ನಿಬಂಧಕರು ವಿಚಾರಣೆಗಳು-11, ಕರ್ನಾಟಕ ಲೋಕಾಯುಕ್ತ ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**"ದೋಷಾರೋಪಣೆ"**

"That you DGO Sri Sharanagouda Vanikyal, the then secretary, Yakthapura Grama Panchayathi, and presintly Panchayath Development Officer at Byalakunte Grama Panchayath in Yadagir District, while discharging your duties, without any action estimate, without any0 reason, without executing any work by the contractor Sri.R.P Patil of Bevinhal, Taluk Surpur, issued the cheque bearing No.1720688 in favour of Sri. R.P Patil for Rs. 3 Lakhs which was the grant released in " Bharath Nirman Yajane" which amount was re-credited by the said contactor on 28.09.2011 and thereby you and Sri. R.P. Patil misappropriated a sum of Rs.3 Lakhs during the period from 3.10.2006 to 28.09.2011 and caused pecuniary loss to the Karanataka State Government and thereby made the grant of Rs. 3.00 Lakhs unavailable to the Karanataka Government for implementing "Bharath Nirmana Yojane" and thereby you failed to committed an act which is unbecoming of a Govrnament servant and this you are guilty of rules, 1966 and liable for recovery of the pecuniary loss caused

to the Karanataka State Government under rule 8(iv) r/w the note there below of KCS (CC & A) Rules, 1957.

ವಿಚಾರಣಾಧಿಕಾರಿಗಳು ತಮ್ಮ ವರದಿಯಲ್ಲಿ ಶ್ರೀ ಶರಣಗೌಡ ಜಿ, ವಣಕ್ಯಾಳ, ಹಿಂದಿನ ಕಾರ್ಯದರ್ಶಿ, ಯುಕ್ತಾಪುರ ಗ್ರಾಮ ಪಂಚಾಯಿತಿ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ, (ಪ್ರಸ್ತುತ ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ) ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ವಿಚಾರಣಾಧಿಕಾರಿಯವರ ವರದಿಯನ್ನು ಉಪಲೋಕಾಯುಕ್ತರು ಅಂಗೀಕರಿಸಿ ಶ್ರೀ ಶರಣಗೌಡ ಜಿ, ವಣಕ್ಯಾಳ, ಕಾರ್ಯದರ್ಶಿಯಾಗಿ ಯುಕ್ತಾಪುರ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುವ ವೇಳೆಯಲ್ಲಿ ಭಾರತ ನಿರ್ಮಾಣ ಯೋಜನೆಯಡಿಯಲ್ಲಿ ಬಿಡುಗಡೆಯಾದ ರೂ.3,00,000/- ಅನುದಾನಕ್ಕೆ ಯಾವುದೇ ರೀತಿಯ ಕ್ರಿಯಾ ಯೋಜನೆ ತಯಾರಿಸದೆ, ಕರಾರು ಒಪ್ಪಂದವನ್ನು ಮಾಡಿಕೊಳ್ಳದೆ ಸದರಿ ಮೊತ್ತವನ್ನು ದುರುಪಯೋಗ ಪಡಿಸಿಕೊಂಡು ನಂತರ ದಿನಾಂಕ:28.09.2011 ರಂದು ದುರುಪಯೋಗ ಪಡಿಸಿಕೊಂಡ ಹಣವನ್ನು ಜಮಾ ಮಾಡಿ ಕರ್ತವ್ಯಲೋಪವೆಸಗಿರುವುದು ಸಾಬೀತಾಗಿರುತ್ತದೆ. ಆದುದರಿಂದ ಸದರಿಯವರಿಂದ ತಾತ್ಕಾಲಿಕವಾಗಿ ದುರುಪಯೋಗವಾಗಿರುವ ರೂ.3,00,000/- ಮೊತ್ತಕ್ಕೆ ರೂ. 1,50,000/- ಬಡ್ಡಿಯನ್ನು ಅವರ ಪಿಂಚಣಿಯಿಂದ ವಸೂಲಿ ಮಾಡುವ ದಂಡನೆ ವಿಧಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ, ಈ ಸಂಬಂಧ ಶ್ರೀ ಶರಣಗೌಡ ಜಿ, ವಣಕ್ಯಾಳ, ಹಿಂದಿನ ಕಾರ್ಯದರ್ಶಿ, ಯುಕ್ತಾಪುರ ಗ್ರಾಮ ಪಂಚಾಯಿತಿ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ, (ಪ್ರಸ್ತುತ ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ) ಇವರಿಗೆ ನಿಯಮಾನುಸಾರ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೋಟೀಸ್ಸನ್ನು ಜಾರಿಗೊಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿ, ಎರಡನೇ ಕಾರಣ ಕೇಳುವ ನೋಟೀಸ್ಸಿಗೆ, ಶ್ರೀ ಶರಣಗೌಡ ಜಿ, ವಣಕ್ಯಾಳ, ಹಿಂದಿನ ಕಾರ್ಯದರ್ಶಿ, ಯುಕ್ತಾಪುರ ಗ್ರಾಮ ಪಂಚಾಯಿತಿ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ, (ಪ್ರಸ್ತುತ ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ) ಅವರು ತಮ್ಮ ಲಿಖಿತ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ತಮ್ಮ ಲಿಖಿತ ಹೇಳಿಕೆಯಲ್ಲಿ ಅವರ ಮೇಲಿನ ಎಲ್ಲಾ ಆರೋಪಗಳನ್ನು ತಳ್ಳಿ ಹಾಕಿರುತ್ತಾರೆ.

ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪ ಸಾಬೀತು ಪಡಿಸಲು ಈ ಕೆಳಕಂಡ ಸಮರ್ಥನೆ ನೀಡಿರುತ್ತಾರೆ.

Charge against DGO that during his tenure as Secretary of Yaktapura Grama Panchayath, Yadgir District, without any action plan and estimate and without getting executed work under "Bhartha Nirmana Yojane" released a sum of Rs.3,00,000/- by way of cheque bearing number 1720688 in favour of the constructor Sri R.P Patil and thereby DGO is guilty of misconduct under Rule 3(1) (i) to (iii) of Karnataka Civil Services (Conduct) Rules 1966 is proved.

Further charge against the DGO that a sum of Rs.3,00,000/- was repaid by the contractor by name R. P Patil on 28-09-2011 and thereby DGO is guilty of temporary misappropriation of Rs. 3,00,000/- is proved.

The then prevailing rate of interest on Rs.3,00,000/- from 03-10-2006 to 28-09-2011 is the pecuniary loss caused to Yaktapura Grama Panchayath by the above misconduct of DGO.

ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರು ಅಂಗೀಕರಿಸಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತಾರೆ.

Having regard to the nature of charge poved against DGO Sri Sharanagouda Vanikyal, the prevailing rate of interest during the above period is taken at 10% per

annum and on the above amount of Rs. 3,00,000/-, the interest come to Rs. 1,50,000/-. Therefore, it is hereby recommended to the Government impose penalty of recovering a sum of Rs, 1,50,000/- from the pension payable to DGO Sri Sharanagouda Vanikyal.

ಸರ್ಕಾರವು ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಶ್ರೀ ಶರಣಗೌಡ ಜಿ, ವಣಕ್ಯಾಳ, ಹಿಂದಿನ ಕಾರ್ಯದರ್ಶಿ, ಯುಕ್ತಾಪುರ ಗ್ರಾಮ ಪಂಚಾಯಿತಿ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ, (ಪ್ರಸ್ತುತ ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ) ಇವರು 2ನೇ ಕಾರಣ ಕೇಳುವ ನೋಟೀಸ್ಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆ, ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ, ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಇವರ ಶಿಫಾರಸ್ಸು ಹಾಗೂ ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಆಪಾದಿತರು 2ನೇ ಕಾರಣ ಕೇಳುವ ನೋಟೀಸ್ಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆ ಸಮರ್ಥನೀಯವಲ್ಲವೆಂದು ಕಂಡುಬಂದಿರುವುದರಿಂದ, ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುವಂತೆ ಶ್ರೀ ಶರಣಗೌಡ ಜಿ, ವಣಕ್ಯಾಳ, ಹಿಂದಿನ ಕಾರ್ಯದರ್ಶಿ, ಯುಕ್ತಾಪುರ ಗ್ರಾಮ ಪಂಚಾಯಿತಿ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ, (ಪ್ರಸ್ತುತ ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ) ಇವರಿಂದ ತಾತ್ಕಾಲಿಕವಾಗಿ ದುರುಪಯೋಗವಾಗಿರುವ ರೂ.3,00,000/- ಮೊತ್ತಕ್ಕೆ ರೂ. 1,50,000/- ಬಡ್ಡಿಯನ್ನು ಅವರ ಪಿಂಚಣಿಯಿಂದ ವಸೂಲಿ ಮಾಡುವ ದಂಡನೆ ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:860:ಗ್ರಾಪಂಕಾ2016 ಬೆಂಗಳೂರು, ದಿನಾಂಕ-29-11-2017.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು, ಶ್ರೀ ಶರಣಗೌಡ ಜಿ, ವಣಕ್ಯಾಳ, ಕಾರ್ಯದರ್ಶಿಯಾಗಿ ಯುಕ್ತಾಪುರ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಹಿಸುವ ವೇಳೆಯಲ್ಲಿ ಭಾರತ ನಿರ್ಮಾಣ ಯೋಜನೆಯಡಿಯಲ್ಲಿ ಬಿಡುಗಡೆಯಾದ ರೂ.3,00,000/- ಅನುದಾನಕ್ಕೆ ಯಾವುದೇ ರೀತಿಯ ಕ್ರಿಯಾ ಯೋಜನೆ ತಯಾರಿಸದೆ ಕರಾರು ಒಪ್ಪಂದವನ್ನು ಮಾಡಿಕೊಳ್ಳದೆ ಸದರಿ ಮೊತ್ತವನ್ನು ದುರುಪಯೋಗ ಪಡಿಸಿಕೊಂಡು ನಂತರ ದಿನಾಂಕ:28.09.2011 ರಂದು ದುರುಪಯೋಗ ಪಡಿಸಿಕೊಂಡ ಹಣವನ್ನು ಜಮಾ ಮಾಡಿ ಕರ್ತವ್ಯಲೋಪವೆಸಗಿರುವುದು ಸಾಬೀತಾಗಿರುತ್ತದೆ. ಆದುದರಿಂದ ಸದರಿಯವರಿಂದ ತಾತ್ಕಾಲಿಕವಾಗಿ ದುರುಪಯೋಗವಾಗಿರುವ ರೂ.3,00,000/- ಮೊತ್ತಕ್ಕೆ ರೂ. 1,50,000/- ಬಡ್ಡಿಯನ್ನು ಅವರ ಪಿಂಚಣಿಯಿಂದ ವಸೂಲಿ ಮಾಡುವ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಯಾದಗಿರಿ ಜಿಲ್ಲೆ.
4. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ.
5. ಶ್ರೀ ಶರಣಗೌಡ ಜಿ, ವಣಕ್ಯಾಳ, ಹಿಂದಿನ ಕಾರ್ಯದರ್ಶಿ, ಯುಕ್ತಾಪುರ ಗ್ರಾಮ ಪಂಚಾಯಿತಿ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ, (ಪ್ರಸ್ತುತ ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ)
6. ಗಣಕ ಕೋಶ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.